## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/98/2021/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 16.03.2023.

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀ ರಾಜೇಶ ಗಾಯಕವಾಡ, ಪಿಡಿಓ, ಕನ್ನೂರು ಗ್ರಾಮ ಪಂಚಾಯತಿ, ಪ್ರಸ್ತುತ ಹಡಗಲಿ ಗ್ರಾಮ ಪಂಚಾಯಿತಿ, ವಿಜಯಪುರ ಜಿಲ್ಲೆ, 2) ಶ್ರೀ ಹಾಜಿಮಲ್ಲಿಕ್, ಅಮೀನಸಾಬ್, ಬಾಲೇಬಾಯಿ, ಅದ್ಯಕ್ಷರು, ಗ್ರಾಮ ಪಂಚಾಯಿತಿ, ಕನ್ನೂರು, ವಿಜಯಪುರ ತಾಲೂಕು ಮತ್ತು ಜಿಲ್ಲೆ, 3) ಶ್ರೀ ಅನೀಲ ಚೌಹಾಣ್, ತಾಂತ್ರಿಕ ಸಹಾಯಕರು ತಾಲೂಕು ಪಂಚಾಯತ್, ವಿಜಯಪುರ, ತಾಲೂಕು ಮತ್ತು ಜಿಲ್ಲೆ, ರವರುಗಳು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1) ಶ್ರೀ. ಗೌಡಪ್ಪ ಸಿದ್ದಪ್ಪ ಬಿರಾದಾರ್, ಕನ್ನೂರು ಗ್ರಾಮ ವಿಜಯಪುರ ತಾಲೂಕು, ವಿಜಯಪುರ ಜಿಲ್ಲೆ ಇವರು 1) ಶ್ರೀ ಬಿ.ಎಸ್.ರಾಥೋಡ್, ಕಾರ್ಯನಿರ್ವಹಣಾಧಿಕಾರಿ,ತಾಲೂಕು ಪಂಚಾಯತ್, ವಿಜಯಪುರ ಜಿಲ್ಲೆ, 2) ಶ್ರೀ ರಾಜೇಶ ಗಾಯಕವಾಡ, ಪಿ.ಡಿ.ಓ. ಕನ್ನೂರು ಗ್ರಾಮ ಪಂಚಾಯತ್, ಪ್ರಸ್ತುತ ಹಡಗಲಿ ಗ್ರಾಮ ಪಂಚಾಯತ್, ವಿಜಯಪುರ ಜಿಲ್ಲೆ, 3) ಹಾಜಿಮಲ್ಲಿಕ್ ಅಮೀನಸಾಬ್ ಬಾಲೇಬಾಯಿ, ಅಧ್ಯಕ್ಷರು, ಗ್ರಾಮ ಪಂಚಾಯತ್, ಕನ್ನೂರು, ವಿಜಯಪುರ, 4) ಶ್ರೀ ಅನೀಲ ಚೌಹಾಣ, ತಾಂತ್ರಿಕ ಸಹಾಯಕರು, ತಾಲೂಕು ಪಂಚಾಯತ್, ವಿಜಯಪುರ ಜಿಲ್ಲೆ (2 ರಿಂದ 4ನೇ ಎದುರುದಾರ ರನ್ನು ವಿಚಾರಣೆ ಕಾಲಕ್ಕೆ ಸೇರ್ಪಡೆಗೊಳಿಸಲಾಗಿದೆ). (ಇನ್ನು ಮುಂದೆ

ಕ್ರಮವಾಗಿ 1 ರಿಂದ 4ನೇ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿರುತ್ತಾರೆ.

2) <u>ದೂರಿನ ಸಾರಾಂಶ:-</u>

i) ದೂರುದಾರನು ತನ್ನ ದೂರಿನಲ್ಲಿ ತೊರವಿ ಗ್ರಾಮ ಪಂಚಾಯಿತಿಯ ಬಸವ ವಸತಿ ಯೋಜನೆ ಅಡಿಯಲ್ಲಿ 640 ಮನೆಗಳ ಪೈಕಿ, 87 ಮನೆಗಳ ಕಟ್ಟಡ ಇಲ್ಲದೇ ಬಿಲ್ಲ ತೆಗೆದಿರುತ್ತಾರೆ. ನಂತರ ತನಿಖೆ ಮಾಡಿ 83 ಮನೆಗಳ ಕಟ್ಟಡ ಇಲ್ಲದೇ ಮನೆಗಳು ಇರುವುದಾಗಿ ತೋರಿಸಿರುತ್ತಾರೆ.

ii) ಎನ್.ಆರ್.ಎಲ್.ವಿ ಇವರ ಕೆಲಸವನ್ನು ಮೇಲ್ವಿಚಾರಕರು ಮಾಡಿರುತ್ತಾರೆ. ಹಾಜರಾತಿ ಇಲ್ಲದೇ ಸಂಬಳವನ್ನು ತೆಗೆದಿರುತ್ತಾರೆ. ತೊರವಿ ಗ್ರಾಮ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಖಾಸಗೀ ಶಾಲೆಯೊಂದಕ್ಕೆ ಕಾಂಪೌಂಡ್ ಕಟ್ಟಿರುತ್ತಾರೆ.

iii) ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಯಲ್ಲಿ ವೇಟೇಜ್ ಇದ್ದವರಿಗೆ ಹುದ್ದೆ ನೀಡದೇ ನಿರ್ಲಕ್ಷ್ಯ ವಹಿಸಿರುತ್ತಾರೆ. ಉದ್ಯೋಗ ಖಾತ್ರಿಯಲ್ಲಿ ಕೃಷಿ ಹೊಂಡವನ್ನು ಮಾಡದೇ ಬಿಲ್ ತೆಗೆದಿರುತ್ತಾರೆ ಎಂಬಂತೆ ನಮೂದಿಸಿ ದೂರು ಸಲ್ಲಿಸಿರುತ್ತಾರೆ.

3) **ಎದುರುದಾರರು ದಿ: 15/11/2021 ರಂದು ಆಕ್ಷೇಪಣೆಯನ್ನು ಸಲ್ಲಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ತಾನು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ವಿಜಯಪುರ ಹುದ್ದೆಯಲ್ಲಿ ಕೆಲಸ ನಿರ್ವಹಿಸಿದ್ದು, ತೊರವಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಸವ ವಸತಿ ಯೋಜನೆ ಅಡಿಯಲ್ಲಿ 640 ಮನೆಗಳ ಪೈಕಿ 87 ಮನೆಗಳ ಕಟ್ಟಡ ಇಲ್ಲದೇ ಬಿಲ್ ತೆಗೆದಿರುತ್ತಾರೆ ಹಾಗೂ 83 ಮನೆಗಳು ಕಟ್ಟಡ

ಇಲ್ಲದೇ ಇರುವುದಾಗಿ ತೋರಿಸಿರುತ್ತಾರೆ ಎನ್ನುವ ವಿಷಯವು ಸತ್ಯಕ್ಕೆ ದೂರವಾದುದ್ದಾಗಿರುತ್ತದೆ.

ನಿವೇಶನಗಳ ಹಂಚಿಕೆ ವಿಚಾರಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಅಧಿಕಾರಿಗಳಿಗೆ ಸಂಬಂಧಿಸಿದ್ದು ತಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ. ತನ್ನ ವಿರುದ್ಧ ವಿನಾ ಕಾರಣ ದೂರು ನೀಡಲಾಗಿರುತ್ತದೆ. ತಾನು ಈಗಾಗಲೇ ದಿ: 31/05/2021 ರಂದು ತಾಲ್ಲೂಕು ಪಂಚಾಯತ್, ವಿಜಯಪುರ ದಿಂದ ವರ್ಗಾವಣೆಯಾಗಿದ್ದು ತನ್ನ ವರ್ಗಾವಣೆಯಾದ ನಂತರ ಸದರಿ ದೂರನ್ನು ನೀಡಲಾಗಿರುತ್ತದೆ. ದೂರಿನಲ್ಲಿ ನಮೂದಿಸಿರುವ ಅಂಶಗಳು ಸತ್ಯಕ್ಕೆ ದೂರವಾದುದ್ದಾಗಿದ್ದು, ತಾವು ಸೇವಾ ಬಡ್ತಿ ಹೊಂದಿರುವುದರಿಂದ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲು ಆಗುವುದಿಲ್ಲ ಹಾಗೂ ಎಲ್ಲಾ ದಾಖಲೆಗಳು ಗ್ರಾಮ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿಯ ಅಧಿಕಾರಿಗಳ ವಶದಲ್ಲಿದ್ದು, ಸದರಿ ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಅಧಿಕಾರಿಗಳಿಂದ ತರಿಸಿಕೊಳ್ಳಲು ಕೋರಲಾಗಿದೆ ಎಂಬಂತೆ ನಮೂದಿಸಿ ಸಲ್ಲಿಸಿರುತ್ತಾರೆ.

4) **ತನಿಖೆಯ ಕಾಲಕ್ಕೆ ದಿ: 07-09-2022 ರಂದು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ ರವರಿಂದ ತನಿಖಾ ವರದಿ ಪಡೆದುಕೊಳ್ಳಲಾಗಿದ್ದು,** ತನಿಖಾ ವರದಿಯಲ್ಲಿ ತನಿಖಾಧಿಕಾರಿಗಳು ಕಗನ್ನಾಗು ಗ್ರಾಮ ಪಂಚಾಯತಿಗೆ ಭೇಟಿ ನೀಡಿ ದೂರುದಾರರು ಆಪಾದಿಸಿರುವ ಅಂಶಕ್ಕೆ ಸಂಬಂಧಿಸಿದಂತೆ ವಿಚಾರಣೆ ಮಾಡಿ, ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

i) ಗೌಡಪ್ಪ ತಂದೆ ಸಿದ್ದಪ್ಪ ಬಿರಾದಾರ ಸಾ: ಕನ್ನೂರ ಇವರಿಗೆ ನೋಟಿಸು ನೀಡಿ ಕಛೇರಿಯಲ್ಲಿ ಹಾಜರ ಪಡಿಸಿಕೊಂಡು ವಿಚಾರಿಸಿ ಹೇಳಿಕೆ ಪಡೆದುಕೊಳ್ಳಲಾಗಿ, ಸದರಿಯವರು ತಮ್ಮ ಹೇಳಿಕೆಯಲ್ಲಿ, ನನಗೆ ಕಳೆದ ಎಂಟು ವರ್ಷದಿಂದ ಲಕ್ವ ಹೊಡೆದಿದ್ದು, ನಾನು ಮನೆಯಲ್ಲಿಯೇ ಇರುತ್ತೇನೆ. ಈಗ ತಾವು ದಿ: 17-12-2021 ರಂದು ನನಗೆ ನೀಡಿದ ನೊಟೀಸಿನಂತೆ ನಾನು ನಿಮ್ಮ ಮುಂದೆ ಹಾಜರಾಗಿರುತ್ತೇನೆ. ಈಗ ತಾವು ನಾನು ಗೌರವಾನ್ವಿತ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ನೀಡಿರುವೆನೆಂದು ಹೇಳಲಾದ ಒಂದು ಅರ್ಜಿಯನ್ನು ತೋರಿಸಿದ್ದು ಅದನ್ನು ನೋಡಿದೆನು. ನನಗೆ ಲಕ್ಷ ಹೊಡೆದಿದ್ದರಿಂದ ಹಾಗೂ ಸರಿಯಾಗಿ ಕಣ್ಣು ಕಾಣದೇ ಇರುವುದರಿಂದ ನನಗೆ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ. ಹೀಗಾಗಿ ಅದರಲ್ಲಿ ಏನು ಬರೆದಿದ್ದಾರೆ ಹಾಗೂ ಆ ಅರ್ಜಿಯ ಜೊತೆಗೆ ಯಾವ ಯಾವ ದಾಖಲಾತಿಗಳನ್ನು ಲಗತ್ತಿಸಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಾಗುವುದಿಲ್ಲ. ಸದರಿ ಅರ್ಜಿಯಲ್ಲಿ ತನ್ನ ತಮ್ಮನ ಮಗ ಸಿದ್ದರಾಯ ಈತನು ತನಗಾದ ಅನ್ಯಾಯದ ಕುರಿತು ಬರೆದಿರುತ್ತಾನೆ.

ಸುಮಾರು 1 1/2 ವರ್ಷದ ಹಿಂದೆ ನಮ್ಮ ಹೊಲ ರಿ.ಸ.ನಂ 24/1ಬಿ ಇದರಲ್ಲಿ ಕೃಷಿ ಹೊಂಡವನ್ನು ನಿರ್ಮಿಸಿದ್ದೆವೆಂದು ನಮ್ಮೂರು ಕನ್ನೂರಿನ ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಗ್ರಾಮ ಪಂಚಾಯತಿಯ ಪಿಡಿಒ, ಇಂಜನೀಯರ್ ಇತರೆ ಸಂಬಂಧಪಟ್ಟ ಅಧಿಕಾರಿಗಳು ಸೇರಿ ಬೋಗಸ್ ಬಿಲ್ ಸೃಷ್ಟಿ ಮಾಡಿ ಹಣವನ್ನು ಎತ್ತಿ ಹಾಕಿರುತ್ತಾರೆ ಎಂದು ನಮಗೆ ಗೊತ್ತಾಗಿ ಈ ಬಗ್ಗೆ ನಾವು ಪಿಡಿಒ, ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಇವರಿಗೆ ಅರ್ಜಿ ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಗೌರವಾನ್ವಿತ

ಲೋಕಾಯುಕ್ತರಿಗೆ ದೂರು ಕೊಡುತ್ತೇವೆ ಎಂದು ಗೊತ್ತಾಗಿ ನಮ್ಮ ಮನೆಗೆ ಬಂದು ಕೃಷಿ ಹೊಂಡ ಮಾಡಿಕೊಡುತ್ತೇವೆ, ದುಡ್ಡು ಕೊಡುತ್ತೇವೆ ಇತ್ಯಾದಿಯಾಗಿ ನಮಗೆ ಆಮಿಷ ಒಡ್ಡಲು ನೋಡಿದರು.

ಸದರಿ ಕಾಮಗಾರಿ ಹಣ ಜಮಾ ಆದ ಕೆಲವು ಕೂಲಿಕಾರ ಜನರಾದ 1) ಭೀಮಾಶಂಕರ ತಂದೆ ಗೌಡಪ್ಪ ಬಿರಾದಾರ 2) ಸಿದರಾಯ ತಂದೆ ಶಂಕರಗೌಡ ಪಾಟೀಲ್ ಇವರಿಗೆ ನೋಟಿಸು ನೀಡಿ ನಮ್ಮ ಕಾರ್ಯಾಲಯದಲ್ಲಿ ಹಾಜರಪಡಿಸಿಕೊಂಡು ಹೇಳಿಕೆ ಪಡೆದುಕೊಳ್ಳಲಾಗಿದ್ದು, 1) ಭೀಮಾಶಂಕರ ತಂದೆ ಗೌಡಪ್ಪ ಬಿರಾದಾರ ಇತನು ಅರ್ಜಿದಾರನ ಮಗನಿದ್ದು, ಇತನು ತನ್ನ ಹೇಳಿಕೆಯನ್ನು ಗೌಡಪ್ಪ ತಂದೆ ಸಿದ್ದಪ್ಪ ಬಿರಾದಾರ ಇವರ ಹೇಳಿಕೆಯಂತೆ ಹಾಗೂ ಪುನ: ಹೇಳಿಕೆಯಲ್ಲಿ ತನ್ನ ಮತ್ತು ತನ್ನ ಹೆಂಡತಿ ಶ್ರೀದೇವಿ ಇಬ್ಬರ ಅಕೌಂಟಿಗೆ ಸನ್ 2020 ವರ್ಷದ ಜನೇವರಿ ತಿಂಗಳಲ್ಲಿ ನಮ್ಮೂರಿನ ಮಲ್ಲಿಕಾರ್ಜುನ ತಂದೆ ದೇವೆಂದ್ರಪ್ಪ ಹಿರೇಮಠ ಇವರು ನಮ್ಮ ಮನೆಗೆ ಬಂದು ನಿಮ್ಮ ಹೆಂಡತಿ ಶ್ರೀದೇವಿ ಇವರ ಅಕೌಂಟಿಗೆ 2739 ರೂ ಜಮಾ ಆಗಿದೇ ಆ ಹಣವನ್ನು ಅಕೌಂಟದಿಂದ ತೆಗೆದು ಕೊಡ್ರಿ ಅಂತಾ ಹೇಳಿ ಅವನ ತಾಭಾದಲ್ಲಿದ್ದ ಮೋಬಾಯಿಲ್ ಮತ್ತು ಒಂದು ಹೆಬ್ಬೆರಳು ಇಡುವ ಮಷಿನ ಮುಖಾಂತರ ನನ್ನ ಹೆಂಡತಿ ಹೆಬ್ಬೆರಳು ಇಟ್ಟು ತನ್ನ ಹೆಂಡತಿ ಅಕೌಂಟದಿಂದ ಹಣ ತೆಗೆದುಕೊಂಡರು.

ತನಗೂ ಕೂಡಾ ನಿಮ್ಮ ಅಕೌಂಟಿಗೆ 2739 ರೂ ಜಮಾ ಆಗಿದೆ ಅವು ತಗೆದು ನನಗೆ ಕೊಡಿ ಅಂತಾ ಅಂದರು. ಅವರು ಸ್ವಾಮಿ ಆಗಿದ್ದು ನಮ್ಮ ಮನೆಯ ಮದುವೆ, ದೇವರ ಕಾರ್ಯಕ್ರಮಗಳಲ್ಲಿ ಹಾಗೂ ಸತ್ತರೆ ಅವರ ಅವಶ್ಯಕತೆ ಇದ್ದುದ್ದರಿಂದ ಅವರಿಗೆ ನಾನು ಯಾವುದೇ ಪ್ರಶ್ನೆ ಮಾಡದೇ ನಮ್ಮೂರ ಸ್ಟೇಟ್ ಬ್ಯಾಂಕಿಗೆ ಹೋಗಿ ಹಣ ತಗೆದು ಕೊಟ್ಟಿರುತ್ತೇನೆ. ಅವರು ಖರ್ಚಿಗೆ ಅಂತಾ ನನಗೆ ಮರಳಿ 300/- ರೂಗಳನ್ನು ಕೊಟ್ಟರು. ಈಗ ತಾವು ತೋರಿಸಿದ ಕೂಲಿಕಾರರ

ಎನ್‌ಎಮ್‌ಆರ್ ಅಸ್ಟದಲ್ಲಿ ನನ್ನ ಹೆಸರಿನ ಮುಂದೆ ಮಾಡಿದ ಸಹಿ ನನ್ನದು ಇರುವದಿಲ್ಲಾ. ಅಂತಾ ತನ್ನ ಹೇಳಿಕೆಯಲ್ಲಿ ನುಡಿದಿರುತ್ತಾರೆ.

ii) ಇತರೆ ಸಾಕ್ಷೀದಾರ ಜನರಾದ ರೇವಣಸಿದ್ಧ ತಂದೆ ಶಾಂತಯ್ಯ ಮಠ, ಸಾದು ವಡ್ಡರ, ಅಂಬಣ್ಣ ತಂದೆ ಮಲ್ಲಪ್ಪ ಹೊನ್ನಳ್ಳಿ, ಕಲ್ಲಪ್ಪ ತಂದೆ ರೇವಪ್ಪ ಬಬಲಾದಿ ಸಾ: ಎಲ್ಲರೂ ಕನ್ನೂರ ಇವರು ತಮ್ಮ ಹೇಳಿಕೆಯಲ್ಲಿ, ನಮಗೆ ಪಂಚಾಯತಿ ವತಿಯಿಂದ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ನಮ್ಮ ಅಕೌಂಟಿಗೆ ಹಣ ಜಮಾ ಮಾಡಿದ ಬಗ್ಗೆ ತಾವು ಮಾಹಿತಿ ತೋರಿಸಿದ್ದು ನೋಡಿದೆವು. ನಮಗೆ ನಮ್ಮ ಊರಿನ ಪಂಚಾಯತಿಯಿಂದ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಉದ್ಯೋಗ ಕಾರ್ಡುಗಳನ್ನು ನೀಡಿರುತ್ತಾರೆ. ನಾವು ಪಂಚಾಯತಿವರು ಹೇಳಿದಂತೆ ಕೆಲಸಗಳನ್ನು ಮಾಡಿರುತ್ತೇವೆ. ಸನ್ 2020 ನೇ ಸಾಲಿನ ಜನೇವರಿ ತಿಂಗಳಲ್ಲಿ ನಮ್ಮ ಅಕೌಂಟಿಗೆ ತಲಾ ಒಬ್ಬಬ್ಬರಿಗೆ 2739 ರೂ. ರಂತೆ ಜಮಾ ಆಗಿದ್ದು, ಆದರೆ ಗೌಡಪ್ಪ ಗೌಡ ಬಿರಾದಾರ ಇವರ ಜಮೀನದಲ್ಲಿ ಕೃಷಿ ಹೊಂಡ ನಿರ್ಮಾಣದ ಕೆಲಸದ ಬಗ್ಗೆ ನಮಗೆ ಮಾಹಿತಿ ಇರುವದಿಲ್ಲಾ. ಕೂಲಿಕಾರರ ಎನ್‌ಎಮ್‌ಆರ್ ಅಸ್ಟದಲ್ಲಿ ನಮ್ಮ ಹೆಸರಿನ ಮುಂದೆ ಮಾಡಿದ ಸಹಿ ನಮ್ಮದು ಇರುವದಿಲ್ಲಾ ಅಂತಾ ಹೇಳಿಕೆಯಲ್ಲಿ ನುಡಿದಿರುತ್ತಾರೆ.

ii) ಶ್ರೀ ಗೌಡಪ್ಪ ಗೌಡ ತಂದೆ ಸಿದ್ದಪ್ಪ ಬಿರಾದಾರ ಇವರ ಜಮೀನ ದಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿ ದಿನಾಂಕ: 01/04/2019 ರಿಂದ ದಿನಾಂಕ: 11/02/2020 ರ ವರೆಗೆ ನಿರ್ಮಾಣ ಕಾರ್ಯ ನಡೆದಿರುತ್ತದೆ.

iv) ದಿನಾಂಕ:03/03/2022 ರಂದು ಪಿಡಿಓ ಗ್ರಾಮ ಪಂಚಾಯತಿ ಕನ್ನೂರ ರವರಿಗೆ ಸದರಿ ಕಾಮಗಾರಿ ಬಗ್ಗೆ ದಾಖಲಾತಿಗಳು ವ ಮಾಹಿತಿಯನ್ನು ಪೂರೈಸಲು ಪತ್ರ ಬರೆದುಕೊಂಡಂತೆ ದಿನಾಂಕ: 07/03/2022 ರಂದು

ಕಾಮಗಾರಿ ಅನುಷ್ಠಾನ ಮಾಡಿದ ಬಗ್ಗೆ ಮಾಹಿತಿ/ದಾಖಲಾತಿಗಳನ್ನು ಪೂರೈಸಿರುತ್ತಾರೆ.

v) ಸದರಿಯವರು ಪೂರೈಸಿದ ಮಾಹಿತಿಯನ್ನು ಪರಿಶೀಲನೆ ಮಾಡಲಾಗಿ, 1) ಕಾಮಗಾರಿ ಅನುಷ್ಠಾನಗೊಂಡ ಜಮೀನಿನ ಖಾತಾ ಉತಾರೆ ಲಗತ್ತಿಸಿರುವದಿಲ್ಲಾ. 2) ಜಮೀನ ಮಾಲೀಕನ ಕರಾರು ಬಾಂಡ ಲಗತ್ತಿಸಿರುವದಿಲ್ಲಾ. 3) ಕಾಮಗಾರಿ ಅನುಷ್ಠಾನಗೊಂಡ ಕಾಲಕ್ಕೆ ತೆಗೆದ ಪೋಟೊಗಳಲ್ಲಿ ಕೂಲಿಕಾರರು ಕೆಲಸ ಮಾಡುತ್ತಿದ್ದರ ಬಗ್ಗೆ ಕಂಡುಬರುವದಿಲ್ಲ. 4) ಕಾಮಗಾರಿ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ಲಗತ್ತಿಸದೇ ಆನ್‌ಲೈನ್ ಪ್ರೀಂಟ್ ಧೃಢಿಕರಿಸಿ ಲಗತ್ತಿಸಿರುತ್ತಾರೆ. 5) ಕಾಮಗಾರಿ ಅನುಷ್ಠಾನಗೊಂಡ ಜಿಪಿಎಸ್ ಬಗ್ಗೆ ನಮೂದ ಇರುವದಿಲ್ಲಾ. 6) ಪುಟ ಸಂಖ್ಯೆ 41,42,47 ರಿಂದ 49,69,75,76 ಇವುಗಳು ಓದಲು ಬರದಂತೆ ಅಸ್ಪಷ್ಟವಾಗಿರುತ್ತವೆ. ಈ ಪ್ರಕಾರ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

vi) ದಿನಾಂಕ: 17/06/2022 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲೂಕ ಪಂಚಾಯತ, ವಿಜಯಪುರವರಿಗೆ ಮಾಹಿತಿ ಪೂರೈಸಲು ಪತ್ರ ಬರೆದುಕೊಂಡಂತೆ ಸದರಿಯವರು ದಿನಾಂಕ: 23/06/2022 ರಂದು ಮಾಹಿತಿ ಪೂರೈಸಿದ್ದು ಸದರಿ ಮಾಹಿತಿಯನ್ನು ಪರಿಶೀಲನೆ ಮಾಡಲಾಗಿ, ಶ್ರೀ ಗೌಡಪ್ಪ ಗೌಡ ಬಿರಾದಾರ ಇವರ ಜಮೀನದಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿಯು ದಿನಾಂಕ:01/04/2019 ರಿಂದ ದಿನಾಂಕ:11/02/2020 ರ ವರೆಗೆ ನಿರ್ಮಾಣ ಕಾಮಗಾರಿ ನಡೆದಿರುವ ಬಗ್ಗೆ ಮತ್ತು ಸದರಿ ಕಾಮಗಾರಿಗೆ ಒಟ್ಟು ರೂ. 80,000/- ಗಳ ಮಂಜೂರ ಆಗಿದ್ದು, ಅದರಲ್ಲಿ ಒಟ್ಟು ರೂ 73,953/- ಗಳನ್ನು ಎನ್.ಎಮ್.ಆರ್ ಪ್ರತಿಯಲ್ಲಿ ಇರುವಂತೆ ಕೂಲಿಕಾರರ ಖಾತೆಗಳಿಗೆ ಸಂದಾಯ ಮಾಡಿರುವ ಬಗ್ಗೆ, ಸದರಿ ಕಾಮಗಾರಿಯಲ್ಲಿ 23 ಜನ ಕೂಲಿಕಾರರು ಕೆಲಸ

ನಿರ್ವಹಿಸಿಸಿರುವ ಬಗ್ಗೆ ನಮೂದ ಇರುತ್ತದೆ. ಆದರೆ ಸದರಿ ಕಾಮಗಾರಿಗೆ ಸಂಬಂಧಿಸಿದ ಸಾಮಗ್ರಿ ಮೊತ್ತವನ್ನು ಸಂದಾಯ ಮಾಡಿದ ಬಗ್ಗೆ ದಾಖಲಾತಿಗಳು ಇರುವದಿಲ್ಲಾ.

vii) ಶ್ರೀ ಗೌಡಪ್ಪಗೌಡ ಬಿರಾದಾರ ಇವರ ಜಮೀನದಲ್ಲಿ ಕೃಷಿ ಹೊಂಡ ಮಂಜೂರ ಆದ ಅವ್ಯವಹಾರ ಬಗ್ಗೆ ತನಿಖೆ ಮಾಡಲು ದಿನಾಂಕ: 09/06/2021 ರಂದು ಶ್ರೀ ಬಿ ಆರ್ ಬಿರಾದಾರ ಸಹಾಯಕ ನಿರ್ದೇಶಕರು, (ಉ.ಗಾ) ವಿಜಯಪುರವರಿಗೆ ನೇಮಿಸಲಾಗಿತ್ತು. ಸದರಿಯವರು ತನಿಖಾ ವರದಿ ಸಲ್ಲಿಸದೇ ಇದ್ದುದ್ದರಿಂದ ದಿನಾಂಕ 28/12/2021, 29/03/2022, 25/04/2022 ರಂದು 3 ನೆನೆಪೋಲೆಗಳನ್ನು ನೀಡಿರುವ ಬಗ್ಗೆ ಮಾಹಿತಿ ಒದಗಿಸಿರುತ್ತಾರೆ.

viii) ದಿನಾಂಕ:09/06/2020 ರಂದು ಸಹಾಯಕ ನಿರ್ದೇಶಕರು (ಉ.ಗ್ರಾ) ಶ್ರೀ ಬಿ ಆರ್ ಬಿರಾದಾರ ಇವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿ ಸದರಿ ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಸೂಚಿಸಲಾಗಿದ್ದರೂ ಅವರು ವರದಿ ಸಲ್ಲಿಸದೇ ಇದ್ದುದ್ದರಿಂದ ದಿನಾಂಕ: 28/12/2021 ರಂದು ಪುನಃ ಸದರಿ ಅರ್ಜಿಯ ಬಗ್ಗೆ ವರದಿ ಸಲ್ಲಿಸಲು ಸೂಚಿಸಿದ್ದು, ಸದರಿ ಎರಡೂ ಪತ್ರಗಳ ಅನ್ವಯ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ತಾಲೂಕ ಪಂಚಾಯತಿ ವಿಜಯಪುರವರು ದಿನಾಂಕ: 30/04/2022 ರಂದು ಸದರಿ ದೂರು ಅರ್ಜಿಯ ಬಗ್ಗೆ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

ix) ಸದರಿ ಅರ್ಜಿ ತನಿಖೆ ಕಾಲಕ್ಕೆ ಸಂಗ್ರಹಿಸಿದ ದಾಖಲಾತಿ, ಹಾಗೂ ಸಾಕ್ಷೀದಾರ ಜನರ ಹೇಳಿಕೆ ಮೇಲಿಂದ ಹಾಗೂ ಸ್ಥಾನಿಕ ಚೌಕಾಶಿಯಿಂದ ಕಂಡುಬರುವುದೇನೆಂದರೆ, ದೂರುದಾರ ಶ್ರೀ ಗೌಡಪ್ಪ ಗೌಡ ಬಿರಾದಾರ ಇವರ ಜಮೀನ ರಿ ಸ ನಂ 24/1ಬಿ ನೇದ್ದು, ಕ್ಷೇತ್ರ 4 ಎಕರೆ 6 ಗುಂಟೆ ಜಮೀನದಲ್ಲಿ ಕೃಷಿ ಹೊಂಡ ಕಾಮಗಾರಿ ಅನುಷ್ಠಾನ ಕಾಲಕ್ಕೆ ಕಾರ್ಯನಿರ್ವಹಿಸಿದ

**ಎದುರುದಾರ-1** ಶ್ರೀ ರಾಜೇಶ. ಗಾಯಕವಾಡ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಕನ್ನೂರ, ಪ್ರಸ್ತೂತ ಪಿಡಿಓ ಗ್ರಾಮ ಪಂಚಾಯತಿ ಹಡಗಲಿ **ಎದುರುದಾರ-2** ಶ್ರೀ ಹಾಜಿಮಲಿಕ್.ಅ.ಬಾಲೆಬಾಯಿ ಅಧ್ಯಕ್ಷಕರು,ಗ್ರಾಮ ಪಂಚಾಯತ, ಕನ್ನೂರ **ಎದುರುದಾರ-3** ಅನೀಲ ಚವ್ಹಾಣ, ತಾಂತ್ರಿಕ ಸಹಾಕರು, ತಾಲೂಕ ಪಂಚಾಯತ ವಿಜಯಪುರ ಇವರುಗಳು ದೂರುದಾರರ ಜಮೀನದಲ್ಲಿ ಭೌತಿಕವಾಗಿ ಕೃಷಿ ಹೊಂಡ ನಿರ್ಮಿಸದಿದ್ದರೂ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು, ನರೇಗಾ ನಿಯಮಾವಳಿಗಳನ್ನು ಪಾಲಿಸದೇ ಸಂಪೂರ್ಣವಾಗಿ ಉಲ್ಲಂಘಿಸಿ, ಕೃಷಿ ಹೊಂಡ ನಿರ್ಮಿಸಿದಂತೆ ಹಾಗೂ ಕೂಲಿಕಾರರು ಕೆಲಸ ಮಾಡದಿದ್ದರೂ ಕೆಲಸ ಮಾಡಿದಂತೆ ದಾಖಲೆಗಳನ್ನು ಸೃಷ್ಟಿಸಿ ಅವರ ಖಾತೆಗಳಿಗೆ ಹಣ ಜಮಾ ಮಾಡಿ ನಂತರ ಜಮಾ ಆದ ಹಣವನ್ನು ಅವರಿಂದ ಮರಳಿ ಪಡೆದು, ಒಟ್ಟು **ರೂ 73,953/- ಗಳ** ಸರಕಾರಿ ಹಣವನ್ನು ದುರ್ಬಳಕೆ ಮಾಡಿದ್ದು ಧೃಢಪಟ್ಟಿರುತ್ತದೆ ಎಂಬಂತೆ ನಮೂದಿಸಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

5) **ತನಿಖಾ ವರದಿಯ ಪ್ರತಿಯನ್ನು ಎದುರುದಾರರಿಗೆ ಕಳುಹಿಸಿ, ಅವರಿಂದ ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿ, 1ನೇ ಎದುರುದಾರರು ತನಿಖಾ ವರದಿಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಮ್ಮ ಜಮೀನಿನಲ್ಲಿ ಕೃಷಿ ಹೊಂಡ ಮಂಜೂರಾದ ಅವ್ಯವಹಾರದ ಬಗ್ಗೆ ಕ್ರಮಕೈಗೊಳ್ಳುವಂತೆ ದಿನಾಂಕ: 07-05-2022 ರಂದು ಪತ್ರವನ್ನು ಸಲ್ಲಿಸಿರುತ್ತಾರೆ. ದೂರುದಾರರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡಿದ್ದರೂ ಸರ್ಕಾರದ ಅನುದಾನವನ್ನು ದುರ್ಬಳಕೆ ಮಾಡಿಕೊಂಡ ಬಗ್ಗೆ ಕ್ರಮಕೈಗೊಳ್ಳಲು ಕೋರಿದ್ದರಿಂದ, ಸದರಿ ಅರ್ಜಿಯ ಬಗ್ಗೆ ತಾನು ಯಾವುದೇ ಕ್ರಮಕೈಗೊಂಡಿಲ್ಲವೆಂದು, ಸದರಿ ಅಂಶವು ತನಗೆ

ಸಂಬಂಧಪಡುವುದಿಲ್ಲವಾದ್ದರಿಂದ ತನ್ನ ಆಕ್ಷೇಪಣೆಯನ್ನು ಅಂಗೀಕರಿಸಬೇಕೆಂದು ಕೋರಿರುತ್ತಾರೆ.

6) **ದಿನಾಂಕ: 07.01.2023 ರಂದು 2 ಮತ್ತು 3ನೇ ಎದುರುದಾರರು ತನಿಖಾ ವರದಿಗೆ ಆಕ್ಷೇಪಣೆ ಸಲ್ಲಿಸಿ,** ತಮ್ಮ ಆಕ್ಷೇಪಣೆಯಲ್ಲಿ ತಾನು ಕೇಂದ್ರ ಸರ್ಕಾರದ ನರೇಗಾ ಯೋಜನೆಯಡಿ 2018-19ನೇ ಸಾಲಿನಲ್ಲಿ ಗೌಡಪ್ಪ ಬಿರಾದಾರ ಇವರು ತೋರಿಸಿದ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಿಸುವ ಸಂಬಂಧ ದಿ: 15-07-2019 ರಂದು ತಾಂತ್ರಿಕ ಮಂಜೂರಾತಿಯನ್ನು ಪ್ರಕಾಶ ಕನ್ನೂರು ಇವರು ನೀಡಿರುತ್ತಾರೆ. ಶ್ರೀಮತಿ ಸುಕನ್ಯಾ ವೈ ಲಂಬೂ, ಪಿಡಿಓ ಇವರು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಸದರಿ ಅವಧಿಯಲ್ಲಿ ತಾನು ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.

ಗೌಡಪ್ಪ ಬಿರಾದಾರ ಇವರು ತೋರಿಸಿದ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಿಸಲು 20 ಜನ ಕೂಲಿಕಾರ್ಮಿಕರನ್ನು ನೇಮಿಸಿ, ರೂ.73,953/-ಗಳನ್ನು ಕೂಲಿಕಾರರಿಗೆ ನೀಡಿ, ಕೃಷಿ ಹೊಂಡ ನಿರ್ಮಿಸಲಾಗಿದೆ. ಕೃಷಿ ಹೊಂಡಕ್ಕೆ ಸಾಮಗ್ರಿಗಳನ್ನು ಬಳಸದೇ ಇರುವುದರಿಂದ ರಸೀದಿಗಳು ಇರುವುದಿಲ್ಲ.

ಭೀಮಾಶಂಕರ ಬಿರಾದಾರ, ಸಿದ್ಧರಾಯ ಬಿರಾದಾರ ಹಾಗೂ ಶ್ರೀಮತಿ ಶ್ರೀದೇವಿ ಬಿರಾದಾರ ಇವರ ಖಾತೆಗೆ ಹಣ ಜಮಾ ಆಗಿದ್ದು ಮಲ್ಲಿಕಾರ್ಜುನ ಹಿರೇಮಠ ಇವರು ಮನೆಗೆ ಬಂದು ಜಮೆಯಾಗಿರುವ ಮೊತ್ತವನ್ನು ಪಿಡಿಓ ಪಡೆದುಕೊಂಡಿರುತ್ತಾರೆಂದು ಹೇಳಿರುತ್ತಾರೆನ್ನುವುದು ಸರಿಯಲ್ಲ.

ಶ್ರೀ ರೇವಣಸಿದ್ಧ ಮಠ, ಸಾದು ವಡ್ಡರ, ಅಂಬಳ ಹೊನ್ನಳ್ಳಿ, ಕಲ್ಲಪ್ಪ ಬಬಲಾದಿ ಇವರು ನೀಡಿರುವ ಹೇಳಿಕೆಯಲ್ಲಿ 2739/- ರೂಗಳು ಬ್ಯಾಂಕ ಖಾತೆಗೆ ಜಮಾ ಆಗಿರುತ್ತವೆಂದು ತಿಳಿಸಿ, ಎನ್.ಎಂ.ಆರ್. ಅಸ್ಟನಲ್ಲಿ ಸಹಿ ತಮ್ಮದು ಇರುವುದಿಲ್ಲವೆಂದು ಹೇಳಿರುತ್ತಾರೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ತನಿಖಾ ವರದಿಯಲ್ಲಿ ಇರುವ ಅಂಶಗಳನ್ನು ಒಪ್ಪಲು ಬರುವುದಿಲ್ಲವೆಂದು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

7) 4ನೇ ಎದುರುದಾರರಿಂದ ದಿನಾಂಕ: 7.01.2023 ರಂದು ಆಕ್ಷೇಪಣೆ ಸ್ವೀಕರಿಸಿದ್ದು ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ತಾನು ಕಾಮಗಾರಿಗಳ ಅಳತೆ ಪುಸ್ತಕದಲ್ಲಿ ದಾಖಲಿಸಿರುತ್ತೇನೆ. ಕೂಲಿಕಾರರಿಗೆ ಪ್ರತಿ ದಿನದ ಕೂಲಿ ಪಡೆಯಲು ಎಷ್ಟು ಪ್ರಮಾಣ ಕೆಲಸ ನಿರ್ವಹಿಸ ಬೇಕೆಂಬುದರ ಬಗ್ಗೆ ಮಾಹಿತಿ ನೀಡಿರುತ್ತೇನೆ. ಎನ್.ಎಂ.ಆರ್.ಗಳನ್ನು ಎಂ.ಐ.ಎಸ್.ನಲ್ಲಿ ಸೇವ್ ಮಾಡುವ ಸಂಬಂಧ ಬಯೋಮೆಟ್ರಿಕ್ ನೀಡುವ ಜವಾಬ್ದಾರಿಯನ್ನು ನಿರ್ವಹಿಸಿರುತ್ತೇನೆ.

ಗೌಡಪ್ಪ ಬಿರಾದಾರ ಇವರು ತೋರಿಸಿರುವ ಜಮೀನಿನಲ್ಲಿ ಕೃಷಿ ಹೊಂಡವನ್ನು ನಿರ್ಮಿಸಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ಸೂಕ್ತ ದಾಖಲು ಮಾಡಿ, ವಿವರಣೆಯನ್ನು ಪಂಚಾಯತ ಅಧಿಕಾರಿಗಳಿಗೆ ನೀಡಿರುತ್ತೇನೆ. ಕೂಲಿಕಾರರಿಗೆ ಹಣ ಜಮಾ ಮಾಡುವ ಅಧಿಕಾರ ತನಗೆ ಇರುವುದಿಲ್ಲ ಹಾಗೂ ಹಣ ವಾಪಸ್ ಪಡೆದಿರುವ ಅಂಶವು ತನಗೆ ಅನ್ವಯಿಸುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

8) ದೂರುದಾರರ ದೂರು, ಎದುರುದಾರರ ಆಕ್ಷೇಪಣೆ, ತನಿಖಾ ವರದಿ ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ಕಾಣಿಸಿದ ಅಂಶಗಳಿಗೆ ಸಂಬಂಧಿಸಿದಂತೆ, ವಿಚಾರಣಾಧಿಕಾರಿ ಸಲ್ಲಿಸಿರುವ ತನಿಖಾ ವರದಿಯನ್ವಯ 2, 3 ಮತ್ತು 4ನೇ ಎದುರುದಾರರು ಕಾಮಗಾರಿಗಳನ್ನು ಭೌತಿಕವಾಗಿ ಜಾರಿಗೊಳಿಸ ದಿದ್ದರೂ ಸಹ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ನಿಯಮಗಳನ್ನು ಪಾಲಿಸದೇ ಕೃಷಿ ಹೊಂಡ ನಿರ್ಮಿಸಿದಂತೆ ಹಾಗೂ ಕೂಲಿಕಾರರು ಕೆಲಸ ಮಾಡದಿದ್ದರೂ ಸಹ ಕೆಲಸ ನಿರ್ವಹಿಸಿರುತ್ತಾರೆಂದು ದಾಖಲೆಗಳನ್ನು ಸೃಷ್ಟಿಸಿ ಅವರ ಖಾತೆಗೆ ಹಣ ಜಮಾ ಮಾಡಿ, ನಂತರ ಜಮಾ ಆದ ಹಣವನ್ನು ಅವರಿಂದ ಮರಳಿ ಪಡೆದು, ಸರ್ಕಾರದ ಹಣ 73953/- ರೂ. ಗಳನ್ನು ದುರ್ಬಳಕೆ ಮಾಡಿಕೊಂಡಿರುವುದು ವಿಚಾರಣಾ ವರದಿಯಿಂದ ಮೇಲ್ನೋಟಕ್ಕೆ ಕಂಡುಬರುತ್ತದೆ.

9) 1 ನೇ ಎದುಗುದಾರರಿಗೆ ಕಾಮಗಾರಿಯ ಉಸ್ತುವಾರಿಯಾಗಲೀ ಅಥವಾ ಹಣ ಸಂದಾಯ ಮಾಡುವ ಅಧಿಕಾರವಾಗಲೀ ಇರದಿರುವ ಕಾರಣ ಸದರಿಯವರ ಆಕ್ಷೇಪಣೆಯನ್ನು ಒಪ್ಪಬಹುದಾಗಿರುತ್ತದೆ. ಆದ್ದರಿಂದ 1ನೇ ಎದುರುದಾರ ರಾದ ಶ್ರೀ ಬಿ.ಎಸ್. ರಾಥೋಡ, ಕಾರ್ಯನಿರ್ವಾಹಣಾಧಿಕಾರಿ, ತಾಲೂಕು ಪಂಚಾಯತ್, ವಿಜಯಪುರ ಇವರನ್ನು ಪ್ರಕಗಣದಿಂದ ಕೈಬಿಡಲಾಗಿದೆ. 2 ರಿಂದ 4ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಸೂಕ್ತ/ಸಮಂಜಸ ಕಾರಣಗಳನ್ನು ನೀಡಿರುವುದಿಲ್ಲವಾದ್ದ ರಿಂದ, ಸದರಿಯವರ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

10) ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii)

ರನ್ವಯ **1ನೇ ಎದುರುದಾರರಾದ** ಶ್ರೀ ರಾಜೇಶ ಗಾಯಕವಾಡ, ಪಿಡಿಓ, ಕನ್ನೂರು ಗ್ರಾಮ ಪಂಚಾಯತಿ, ಪ್ರಸ್ತುತ ಹಡಗಲಿ ಗ್ರಾಮ ಪಂಚಾಯಿತಿ, ವಿಜಯಪುರ ಜಿಲ್ಲೆ, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು, ಕರ್ನಾಟಕ ನಾಗರಿಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ನಿಯಮ 14–ಎ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ.

11) ಅಲ್ಲದೇ 3ನೇ ಎದುರುದಾರರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿರುವುದು ಹಾಗೂ 4ನೇ ಎದುರುದಾರರು ಖಾಯಂ ಸರ್ಕಾರಿ ನೌಕರರಲ್ಲದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣದ 43(ಎ), 48(4) ಮತ್ತು 48(5) ರಡಿ ಸಕ್ಷಮ ಪ್ರಾಧಿಕಾರ ಕ್ರಮ ಜರುಗಿಸಿ, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

16/3/23

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.